ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014-15 : ದಿನಾಂಕ: 19-11-2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸುವರ್ಣ ಮಹೋತ್ಸವ ಸಮಾರಂಭ:<br><br>ಸುವರ್ಣ ಮಹೋತ್ಸವ ಉದ್ಘಾಟನೆ ಹಾಗೂ ಸುವರ್ಣ ಭವನದ ಶಂಕುಸ್ಥಾಪನೆ:<br><br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ<br><br>ಅಧ್ಯಕ್ಷತೆ:<br><br>ಶ್ರೀ ಆರ್. ರೋಷನ್ ಬೇಗ್,<br>ಮೂಲಸೌಕರ್ಯ ಅಭಿವೃದ್ಧಿ, ವಾರ್ತಾ ಮತ್ತು ಹಜ್ ಖಾತೆ ಸಚಿವರು. | 20-11-2014<br>ಗುರುವಾರ<br>ಬೆಳಗ್ಗೆ<br>11-00 ಗಂಟೆಗೆ | ಜ್ಞಾನಜ್ಯೋತಿ ಸಭಾಂಗಣ,<br>ಅರಮನೆ ರಸ್ತೆ,<br>ಬೆಂಗಳೂರು. |

| | | | |
|---|---|---|---|
| 2. | <u>ಕೃಷಿ ಮೇಳ – 2014</u>:<br><br><u>ಪ್ರಶಸ್ತಿ ಪ್ರದಾನ:</u><br><br>ಡಾ. ಡಿ.ವಿ. ಸದಾನಂದ ಗೌಡ,<br>ಕಾನೂನು ಸಚಿವರು,<br>ಭಾರತ ಸರ್ಕಾರ.<br><br><u>ಮುಖ್ಯ ಅತಿಥಿಗಳು:</u><br><br>ಶ್ರೀ ಬಿ. ರಮಾನಾಥ್ ರೈ,<br>ಅರಣ್ಯ ಖಾತೆ ಸಚಿವರು.<br><br>ವಿ.ಸೂ: ಬೆಂಗಳೂರು ಕಬ್ಬನ್ ಉದ್ಯಾನವನದ ಪ್ರೆಸ್ ಕ್ಲಬ್ ಆವರಣದಿಂದ ಬೆಳಗ್ಗೆ 10.15 ಗಂಟೆಗೆ ಕೃಷಿ ವಿಶ್ವ ವಿದ್ಯಾನಿಲಯದ ವಾಹನ ವ್ಯವಸ್ಥೆ ಮಾಡಲಾಗಿದೆ.<br><br><u>ಸಂಪರ್ಕ</u>:<br><br>ಡಾ ಎಲ್. ರಾಮಕೃಷ್ಣ ರಾವ್,<br>ಮೊ. ನಂ. 9986663132<br>ಶ್ರೀ ಅಶೋಕ್<br>ಮೊ. ಸಂ. 9886690866 | 20-11-2014<br>ಗುರುವಾರ<br><br>ಬೆಳಗ್ಗೆ<br>11-00 ಗಂಟೆಗೆ | ಕೃಷಿ ಮೇಳ ಆವರಣ,<br><br>ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿ.ಕೆ.ವಿಕೆ.)<br><br>ಬೆಂಗಳೂರು, |
| 3. | ಲೋಕೋಪಯೋಗಿ ಇಲಾಖೆ ಗುತ್ತಿಗೆದಾರರ ಆನ್‌ಲೈನ್ ನೋಂದಣಿ ಕಾರ್ಯಕ್ಕೆ ಚಾಲನೆ:<br><br><u>ಚಾಲನೆ ನೀಡುವವರು</u> :<br><br>ಡಾ. ಹೆಚ್.ಸಿ. ಮಹದೇವಪ್ಪ,<br>ಲೋಕೋಪಯೋಗಿ ಖಾತೆ ಸಚಿವರು | 20-11-2014<br>ಗುರುವಾರ<br>ಮಧ್ಯಾಹ್ನ<br>01-00 ಗಂಟೆಗೆ | ಸಮ್ಮೇಳನ ಸಭಾಂಗಣ<br>ಕೊಠಡಿ ಸಂಖ್ಯೆ 334<br>ಮೂರನೇ ಮಹಡಿ<br>ವಿಧಾನಸೌಧ<br>ಬೆಂಗಳೂರು. |

| | | | |
|---|---|---|---|
| 4 | ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನೂತನ ಕಚೇರಿ ಕಟ್ಟಡ ಉದ್ಘಾಟನಾ ಸಮಾರಂಭ:<br>ಉದ್ಘಾಟನೆ:<br>ಶ್ರೀ ಬಿ. ರಮಾನಾಥ ರೈ,<br>ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು<br>ಘನ ಉಪಸ್ಥಿತಿ:<br>ಶ್ರೀ ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು | 20-11-2014<br>ಗುರುವಾರ<br>ಮಧ್ಯಾಹ್ನ<br>1-00 ಗಂಟೆಗೆ | ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಆವರಣ<br>ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ<br>ಕಲ್ಕೆರೆ,<br>ಬೆಂಗಳೂರು |
| 5. | <u>ಕೃಷಿ ಮೇಳ – 2014</u>:<br><u>ಪ್ರಶಸ್ತಿ ಪ್ರದಾನ:</u><br>ಶ್ರೀ ಸಿದ್ಧರಾಮಯ್ಯ,<br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ<br>ಅಧ್ಯಕ್ಷತೆ:<br>ಶ್ರೀ ಕೃಷ್ಣ ಭೈರೇಗೌಡ,<br>ಕೃಷಿ ಖಾತೆ ಸಚಿವರು,<br>ವಿ.ಸೂ: ಬೆಂಗಳೂರು ಕಬ್ಬನ್ ಉದ್ಯಾನವನದ ಪ್ರೆಸ್ ಕ್ಲಬ್ ಆವರಣದಿಂದ ಮಧ್ಯಾಹ್ನ 2-30 ಗಂಟೆಗೆ ಕೃಷಿ ವಿಶ್ವ ವಿದ್ಯಾನಿಲಯದ ವಾಹನ ವ್ಯವಸ್ಥೆ ಮಾಡಲಾಗಿದೆ.<br><u>ಸಂಪರ್ಕ</u>:<br>ಡಾ ಎಲ್. ರಾಮಕೃಷ್ಣ ರಾವ್,<br>ಮೊ. ನಂ. 9986663132<br>ಶ್ರೀ ಅಶೋಕ್<br>ಮೊ. ಸಂ. 9886690866 | 20-11-2014<br>ಗುರುವಾರ<br>ಮಧ್ಯಾಹ್ನ<br>3-30 ಗಂಟೆಗೆ | ಕೃಷಿ ಮೇಳ ಆವರಣ,<br>ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿ.ಕೆ.ವಿಕೆ.)<br>ಬೆಂಗಳೂರು, |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಪ್ರತಿ ಹೊಲಕ್ಕೆ ನೀರು, ಪ್ರತಿ ಕೈಗೆ ಕೆಲಸ ನೀಡಿ: ರಾಜ್ಯಪಾಲರ ಸಲಹೆ

ಬೆಂಗಳೂರು, ನ. 19 (ಕರ್ನಾಟಕ ವಾರ್ತೆ)-

ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಮಳೆಗಾಲದಲ್ಲಿ ಪ್ರವಾಹ ಬಂದು ಹರಿದು ವ್ಯರ್ಥವಾಗುವ ನೀರನ್ನು ರೈತನ ಹೊಲಗಳಿಗೆ ಹರಿಸಿದಲ್ಲಿ ಕೃಷಿ ಕ್ಷೇತ್ರದ ಅಭಿವೃದ್ಧಿ ಸಾಧ್ಯ. ಪ್ರತಿ ಹೊಲಕ್ಕೆ ನೀರು, ದುಡಿಯುವ ಕೈಗೆ ಕೆಲಸ ನೀಡಿದರೆ ಸಮೃದ್ಧಿ ನೆಲೆಸುತ್ತದೆ ಎಂದು ರಾಜ್ಯಪಾಲ ಶ್ರೀ ವಾಜುಭಾಯಿ ವಾಲಾ ಅವರು ನುಡಿದರು.

ಅವರು ಇಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಏರ್ಪಡಿಸಿದ್ದ 'ಕೃಷಿ ಮೇಳ' ವನ್ನು ಉದ್ಘಾಟಿಸಿ ಮಾತನಾಡಿದರು. ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ನೀರಿನ ಹಂಚಿಕೆಯನ್ನು ಸಮರ್ಥವಾಗಿ ನಿಭಾಯಿಸಿದರೆ, ಮಳೆಯನ್ನು ನಂಬಿ ವರ್ಷಕ್ಕೊಂದು ಬೆಳೆ ತೆಗೆಯುವ ರೈತ ಮೂರು ಬೆಳೆ ತೆಗೆಯಲು ಸಾಧ್ಯ. ಅಂತೆಯೇ ಕೃಷಿ ವಿಜ್ಞಾನಿಗಳು ತಮ್ಮ ಸಂಶೋಧನೆಯ ಫಲವನ್ನು ರೈತರಿಗೆ ತಲುಪಿಸಲು ಶ್ರಮಿಸಬೇಕು ಎಂದು ನುಡಿದರು. ರೈತರಿಗೆ ಮಣ್ಣಿನ ಆರೋಗ್ಯ, ಬೆಳೆಗಳ ಆಯ್ಕೆ ಮೊದಲಾದ ವಿಚಾರಗಳಲ್ಲಿ ಸೂಕ್ತ ಮಾರ್ಗದರ್ಶನ ನೀಡಬೇಕು. ರೈತರ ಸಬಲೀಕರಣದಿಂದ ದೇಶ ಸದೃಢವಾಗುತ್ತದೆ ಎಂದು ಅವರು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೃಷಿ ಸಚಿವ ಶ್ರೀ ಕೃಷ್ಣ ಬೈರೇಗೌಡ ಅವರು, ಮಳೆಯಾಶ್ರಿತ ರೈತರು ರಾಜ್ಯದಲ್ಲಿ ಶೇ. 70 ರಷ್ಟಿದ್ದು, ಅವರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಇನ್ನೊಂದು ತಿಂಗಳೊಳಗಾಗಿ 'ಕೃಷಿ ಭಾಗ್ಯ' ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕೃಷಿ ಕ್ಷೇತ್ರದ ಇನ್ನೆರಡು ಮೂಲಭೂತ ಸಮಸ್ಯೆಗಳಾದ ಕೂಲಿ ಕಾರ್ಮಿಕರ ಸಮಸ್ಯೆ ಹಾಗೂ ಬೆಲೆ ಕುಸಿತದ ಸಮಸ್ಯೆಗಳ ಪರಿಹಾರಕ್ಕೂ ಸರ್ಕಾರ ಕ್ರಮ ಕೈಗೊಳ್ಳುತ್ತಿದೆ. ಕೃಷಿ ಕಾರ್ಮಿಕರ ಸಮಸ್ಯೆಗೆ ಪರಿಹಾರವಾಗಿ ಹೋಬಳಿ ಮಟ್ಟದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಯಂತ್ರೋಪಕರಣಗಳ ಸೇವಾ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು. ಇದಕ್ಕಾಗಿ 70 ಕೋಟಿ ಅನುದಾನ ಮೀಸಲಿಡಲಾಗಿದೆ. ಕೃಷಿ ಉತ್ಪನ್ನಗಳ ಬೆಲೆ ಕುಸಿದಾಗ ಸರ್ಕಾರ ನೇರವಾಗಿ ಮಧ್ಯ ಪ್ರವೇಶ ಮಾಡಿ ಕಳೆದ ಬಾರಿ 2000 ಕೋಟಿ ರೂ. ಮೌಲ್ಯದ ಬೆಳೆಗಳನ್ನು ಬೆಂಬಲ ಬೆಲೆ ನೀಡಿ ಖರೀದಿಸಲಾಗಿತ್ತು. ಈ ಬಾರಿಯೂ ಅಂತಹ ಸಮಸ್ಯೆ ಎದುರಾದರೆ ಬೆಲೆ ಸ್ಥಿರೀಕರಣಕ್ಕೆ ಅಗತ್ಯವಾದ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು.

ಮುಂದಿನ ಮೂರು ವರ್ಷಗಳಲ್ಲಿ ರೈತರಿಗೆ ಮಣ್ಣಿನ ಆರೋಗ್ಯದ ಮಾಹಿತಿ ನೀಡುವ ಸಾಯಿಲ್ ಹೆಲ್ತ್ ಕಾರ್ಡ್ ನೀಡುವ ಗುರಿ ಹೊಂದಲಾಗಿದ್ದು, ಆ ಮೂಲಕ, ಯಾವ ಮಣ್ಣಿಗೆ ಯಾವ ಬೆಳೆ ಸೂಕ್ತ, ಮಣ್ಣಿನ ಆರೋಗ್ಯ ರಕ್ಷಣೆಯ ಕ್ರಮಗಳು ಮುಂತಾದ ವಿಷಯಗಳ ಕುರಿತು ವೈಜ್ಞಾನಿಕ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು.

ಸರ್ಕಾರ ರೈತರ ಸಂಕಷ್ಟಗಳಿಗೆ ಸದಾ ಸ್ಪಂದಿಸುತ್ತಿದ್ದು, ಈ ವರ್ಷ ಅತಿವೃಷ್ಟಿ, ಅನಾವೃಷ್ಟಿ ಹಾಗೂ ಆಲಿಕಲ್ಲು ಮಳೆಯಿಂದ ತತ್ತರಿಸಿದ ರೈತರಿಗೆ ರಾಜ್ಯ ಸರ್ಕಾರದ ವತಿಯಿಂದ 537 ಕೋಟಿ ರೂ. ಪರಿಹಾರ ವಿತರಿಸಲಾಗಿದೆ. ಕೇಂದ್ರ ಸರ್ಕಾರದ ಪರಿಹಾರವನ್ನು ನಿರೀಕ್ಷಿಸಲಾಗುತ್ತಿದೆ ಎಂದು ತಿಳಿಸಿದರು.

ಕೃಷಿ ಮೇಳದಲ್ಲಿ ಎಷ್ಟು ಲಕ್ಷ ಜನ ಭಾಗವಹಿಸಿದ್ದರು ಎನ್ನುವುದಕ್ಕಿಂತ ಎಷ್ಟು ರೈತರು ಇಲ್ಲಿ ಪಡೆದ ಮಾಹಿತಿ, ತಂತ್ರಜ್ಞಾನದ ಅರಿವನ್ನು ತಮ್ಮ ಕೃಷಿ ಚಟುವಟಿಕೆಯಲ್ಲಿ ಅಳವಡಿಸಿಕೊಳ್ಳುತ್ತಾರೆ ಎನ್ನುವುದು ಮುಖ್ಯ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಹೊಸ ತಳಗಳಾದ ತೊಗರಿ ಬಿಆರ್‌ಜಿ 5 ಹಾಗೂ ಶೇಂಗಾ ಕೆಸಿಜಿ 6ನ್ನು ಮತ್ತು ಕೃಷಿ ಕ್ಯಾಲೆಂಡರನ್ನು ರಾಜ್ಯಪಾಲರು ಬಿಡುಗಡೆ ಮಾಡಿದರು.

ಇದೇ ಸಂದರ್ಭದಲ್ಲಿ ಶ್ರೀ ಸಿ. ಬೈರೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ಪ್ರಶಸ್ತಿಯನ್ನು ಸಕಲೇಶಪುರದ ಶ್ರೀ ಎಚ್.ಎಲ್. ನರೇಶ್ ಅವರಿಗೆ ಹಾಗೂ ಡಾ. ಎಂ.ಎಚ್. ಮರಿಗೌಡ ರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿಯನ್ನು ಶಿವಮೊಗ್ಗದ ಶ್ರೀ ಜಿ.ಎಂ. ರಘು ಹಾಗೂ ಶೃಂಗೇರಿಯ ಶ್ರೀ ಕೆ.ಎಂ. ಮಲ್ಲಪ್ಪ ಹೆಗಡೆ ಅವರಿಗೆ ಪ್ರದಾನ ಮಾಡಲಾಯಿತು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿ ಡಾ. ಡಿ.ಪಿ. ಕುಮಾರ್ ಸ್ವಾಗತಿಸಿದರು. ವಿಸ್ತರಣಾ ನಿರ್ದೇಶಕ ಡಾ. ನಾಗರಾಜ ವಂದಿಸಿದರು.

## ಮಹಾಲಕ್ಷ್ಮೀ ಬಡಾವಣೆ ಶ್ರೀ ಹನುಮ ಜಯಂತೋತ್ಸವ

**ಬೆಂಗಳೂರು, 19 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಕರ್ನಾಟಕ ಸರ್ಕಾರದ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆಗೆ ಸೇರಿದ ಮಹಾಲಕ್ಷ್ಮೀ ಬಡಾವಣೆ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಡಿಸೆಂಬರ್ 4 ರಿಂದ 8 ರವರೆಗೆ ಶ್ರೀ ಹನುಮ ಜಯಂತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಆಡಳಿತಾಧಿಕಾರಿಗಳು ಆದ ಬೆಂಗಳೂರು ನಗರ ಜಿಲ್ಲೆ ವಿಶೇಷ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮ:ಬಾಬು:ಜಿಪಿಆರ್.

## ಮೂಲ ದಾಖಲಾತಿ ಪರಿಶೀಲನೆ

**ಬೆಂಗಳೂರು, 19 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ಜಲ ಸಂಪನ್ಮೂಲ ಇಲಾಖೆಯಲ್ಲಿನ ಸಹಾಯಕ ಇಂಜಿನಿಯರ್ (ಸಿವಿಲ್) 365 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ 27-11-2014 ರಿಂದ 29-11-2014 ರವರೆಗೆ ಬೆಳಿಗ್ಗೆ 10.00 ಗಂಟೆಗೆ ಮತ್ತು ಮಧ್ಯಾಹ್ನ 2-00 ಗಂಟೆಗೆ ಮೂಲ ದಾಖಲಾತಿಗಳ ಪರಿಶೀಲನೆಯನ್ನು ಆಯೋಗದ ಕೇಂದ್ರ ಕಚೇರಿ, ಬೆಂಗಳೂರು ಇಲ್ಲಿ ನಡೆದಿದೆ.

ಅರ್ಹ ಅಭ್ಯರ್ಥಿಗಳಿಗೆ ಸೂಚನಾ ಪತ್ರಗಳನ್ನು ಈಗಾಗಲೇ ಕಳಹಿಸಲಾಗಿದೆ. ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ, ಪರಿಶೀಲನೆಯ ವೇಳೆ

ಮತ್ತು ದಿನಾಂಕ, ಇತ್ಯಾದಿ ವಿವರಗಳನ್ನು ಮಾಹಿತಿಗಾಗಿ ಆಯೋಗದ ವೆಬ್‌ಸೈಟ್ **"http://kpsc.kar.nic.in/Home Page"** ರಲ್ಲಿ ಪ್ರಕಟಿಸಿದೆ.

ಅರ್ಹ ಅಭ್ಯರ್ಥಿಗಳಿಗೆ ಸೂಚನಾ ಪತ್ರ ಸ್ವೀಕೃತವಾಗದಿದ್ದಲ್ಲಿ ಸಂಬಂಧಿತ ದಾಖಲೆಗಳೊಂದಿಗೆ ಕೇಂದ್ರ ಕಚೇರಿಯನ್ನು ಮೂಲ ದಾಖಲಾತಿಗಳ ಪರಿಶೀಲನೆಗೆ ನಿಗದಿಪಡಿಸಿರುವ ದಿನಾಂಕದೊಳಗೆ ಸಂಪರ್ಕಿಸಬಹುದು.

ಸಮ:ಬಾಬು:ಜಿಪಿಆರ್.

## 2018 ರ ವೇಳೆಗೆ ಕರ್ನಾಟಕ ಬಯಲು ಬರ್ಹಿದೆಸೆ ಮುಕ್ತ ರಾಜ್ಯ

**ಬೆಂಗಳೂರು, 19 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಶುದ್ದ ಕುಡಿಯುವ ನೀರು, ಶೌಚಾಲಯ ಹಾಗೂ ಬಚ್ಚಲು ಮನೆ ನಿರ್ಮಾಣಕ್ಕೆ ನಮ್ಮ ಸರ್ಕಾರ ಆದ್ಯತೆ ನೀಡಿದ್ದು 2018 ರ ವೇಳೆಗೆ ರಾಜ್ಯವನ್ನು ಬಯಲು ಬರ್ಹಿದೆಸೆ ಮುಕ್ತರಾಜ್ಯವನ್ನಾಗಿ ಮಾಡುವ ಗುರಿಹೊಂದಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಶ್ರೀ ಹೆಚ್.ಕೆ. ಪಾಟೀಲ್ ಅವರು ತಿಳಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಹಾಗೂ ಯುನಿಸೆಫ್ ಸಹಯೋಗದಲ್ಲಿ ವಿಕಾಸ ಸೌಧದಲ್ಲಿ ಇಂದು ಏರ್ಪಡಿಸಿದ್ದ ನೈರ್ಮಲ್ಯದ ಬಗ್ಗೆ ಮಾಧ್ಯಮ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು 2015 ರ ಆಗಸ್ಟ್ ವೇಳೆಗೆ 10000 ಗ್ರಾಮಗಳನ್ನು ಬಯಲು ಬರ್ಹಿದೆಸೆ ಮುಕ್ತ ಗ್ರಾಮಗಳನ್ನಾಗಿ ಮಾಡಲಾಗುವುದೆಂದು ಸಚಿವರು ತಿಳಿಸಿದರು. ಈ ವರ್ಷ 10 ಲಕ್ಷ ಶೌಚಾಲಯ ನಿರ್ಮಾಣ ಮಾಡುವ ಗುರಿ ಹೊಂದಲಾಗಿದೆ ಎಂದ ಸಚಿವರು ಡಿಸೆಂಬರ್ ಒಳಗಾಗಿ 9 ಲಕ್ಷ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗುವುದು ಎಂದರು.

ರಾಜ್ಯದಲ್ಲಿ ಇನ್ನೂ 50 ಲಕ್ಷ ಶೌಚಾಲಯ ನಿರ್ಮಾಣವಾಗಬೇಕಾಗಿದೆ ಎಂದ ಸಚಿವರು ಪ್ರತಿ ಶೌಚಾಲಯಗಳ ನಿರ್ಮಾಣಕ್ಕೆ ಸರ್ಕಾರ 12,000 ರೂ. ಅನುದಾನ ನೀಡಲಾಗುತ್ತಿದೆ ಎಂದರು. ಹೆಣ್ಣುಮಕ್ಕಳಿಗೆ ಗ್ರಾಮೀಣ ಭಾಗದಲ್ಲಿ ಬಚ್ಚಲು ಮನೆ ಅತ್ಯಗತ್ಯವಾಗಿ ಬೇಕಾಗಿದ್ದು ಈ ಸಾಲಿನಲ್ಲಿ 1.50 ಲಕ್ಷ ಶೌಚಾಲಯ ಸಹಿತ ಬಚ್ಚಲು ಮನೆ ನಿರ್ಮಾಣ ಮಾಡುವ ಗುರಿ ಹೊಂದಲಾಗಿದೆ ಎಂದರು.

ರಾಜ್ಯದಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕೆ ಅಗತ್ಯ ಸೌಲಭ್ಯ ಗುರುತಿಸಲು 20 ಲಕ್ಷ ರೂ.ಗಳನ್ನು ನೀಡಲಾಗುವುದು ಎಂದ ಸಚಿವರು ಕುಡಿಯುವ ನೀರಿನ ಅಶುದ್ಧತೆಯಿಂದಾಗಿ ಪ್ರತಿ 20 ಸೆಕೆಂಡುಗಳಿಗೆ ಒಂದು ಮಗು ಸಾವನ್ನಪ್ಪುತ್ತಿದೆ ಇದು ಅಪಾಯಕಾರಿ ಬೆಳವಣಿಗೆ ಎಂದರು. ಈ ವರ್ಷ ರಾಜ್ಯದಲ್ಲಿ 3000 ಶುದ್ಧ ನೀರಿನ ಘಟಕಗಳನ್ನು ಪ್ರಾರಂಭಿಸಲಾಗುವುದೆಂದ ಸಚಿವರು ಈ ಶೌಚಾಲಯ ನಿರ್ಮಾಣ ಬಚ್ಚಲು ಮನೆ ನಿರ್ಮಾಣ ಕಾರ್ಯಕ್ರಮಗಳು ಜನಾಂದೋಲನವಾಗಿ ರೂಪುಗೊಳ್ಳಬೇಕಾಗಿದೆ ಎಂದರು.

ರಾಜ್ಯದ ಯುನಿಸೆಫ್ ಮುಖ್ಯಸ್ಥೆ ಶ್ರೀಮತಿ ರೂಪ್ ಲಿಯಾನೋ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಆಯುಕ್ತರಾದ ಶ್ರೀ ಮುನಿಷ್ ಮೌದ್ಗಲ್ ಹಾಗೂ ಪತ್ರಕರ್ತರು ಭಾಗವಹಿಸಿದ್ದರು.

ಸಮ/ಬಾಬು/ಕೆಪಿಪಿ/ಕೆಎಂ

## ರಾಷ್ಟ್ರೀಯ ಐಕ್ಯತಾ ಸಪ್ತಾಹ: ಪ್ರತಿಜ್ಞಾ ವಿಧಿ ಸ್ವೀಕಾರ

ಬೆಂಗಳೂರು, 19 ನೇ ನವೆಂಬರ್ (ಕರ್ನಾಟಕ ವಾರ್ತೆ)

ರಾಷ್ಟ್ರೀಯ ಐಕ್ಯತಾ ಸಪ್ತಾಹ ಆಚರಣೆ ಅಂಗವಾಗಿ ವಿಧಾನ ಸೌಧ ಮುಂಭಾಗ ಇಂದು ಏರ್ಪಡಿಸಿದ್ದ ಧ್ವಜಾರೋಹಣ ಮತ್ತು ಐಕ್ಯತಾ ಪ್ರಮಾಣ ವಚನ ಬೋಧನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು. ಈ ಸಂದರ್ಭದಲ್ಲಿ ಭಾರತದ ಮಾಜಿ ಪ್ರಧಾನ ಮಂತ್ರಿ ದಿವಂಗತ ಇಂದಿರಾಗಾಂಧಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು. ಮೂಲಭೂತ ಸೌಲಭ್ಯ ಅಭಿವೃದ್ಧಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವ ಶ್ರೀ ಆರ್ ರೋಷನ್ ಬೇಗ್, ಗೃಹ ಖಾತೆ ಸಚಿವ ಶ್ರೀ ಕೆ. ಜೆ. ಜಾರ್ಜ್, ನಗರಾಭಿವೃದ್ಧಿ ಖಾತೆ ಸಚಿವರಾದ ಶ್ರೀ ವಿನಯ್‌ಕುಮಾರ್ ಸೊರಕೆ, ಯುವಜನ ಸೇವೆ ಮತ್ತು ಕ್ರೀಡಾ ಖಾತೆ ಸಚಿವ ಶ್ರೀ ಅಭಯ್ ಚಂದ್ರ, ಕಾನೂನು ಸಚಿವ ಶ್ರೀ ಟಿ. ಬಿ. ಜಯಚಂದ್ರ ಅವರು ಉಪಸ್ಥಿತರಿದ್ದರು.

ಸಮ/ಬಾಬು/ಕೆಪಿಪಿ/ಕೆಎಂ

## Poultry Training Programme

**Bangalore, November 19, (Karnataka Information):**

**The State Poultry Breeding and Training Centre, Hesaraghatta, Bangalore 560 089 has organized 6 days Poultry Training Programme from 24-11-2014 to 29-11-2014. Interested persons may attend the Training programme. Further information contact Deputy Director National Co-ordinated Poultry Breeding Programme, State Poultry Farm, Hessarghatta, Bangalore -89 Ph 080-28466093.**

ಸಮ/ಬಾಬು/ಕೆಎಂ

## ಕೋಳಿ ಸಾಕಾಣಿಕೆ ತರಬೇತಿ

ಬೆಂಗಳೂರು, ನವೆಂಬರ್ 19 (ಕರ್ನಾಟಕ ವಾರ್ತೆ):

ರಾಜ್ಯ ಕೋಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಹೆಸರಘಟ್ಟ, ಇಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖಾವತಿಯಿಂದ ನವೆಂಬರ್ 24 ರಿಂದ 29 ರವರೆಗೆ 6 ದಿನಗಳ ಕೋಳಿ ಸಾಕಾಣಿಕೆಯ ಬಗ್ಗೆ ತರಬೇತಿಯನ್ನು ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 080- 28466093 ನ್ನು ಸಂಪರ್ಕಿಸಲು ರಾಜ್ಯ ಕೋಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಹೆಸರಘಟ್ಟ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮ/ಬಾಬು/ಕೆಎಂ